**ದಿನಾಂಕ: 26.12.2019 ರಂದು ಮಧ್ಯಾಹ್ನ 12.00 ಗಂಟೆಗೆ ವಿಧಾನ ಸೌಧ, 3ನೇ ಮಹಡಿ, ಕೊಠಡಿ ಸಂಖ್ಯೆ: 334 ರಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಟಿ.ಎಂ. ವಿಜಯ ಭಾಸ್ಕರ್ ಭಾ.ಆ.ಸೇ ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ 18ನೇ ರಾಜ್ಯ ಮಟ್ಟದ ಪ್ರಗತಿ ಪರಿಶೀಲನ ಸಭೆಯ ನಡವಳಿ.**

ಸಭೆಯ ಹಾಜರಾತಿ ಪಟ್ಟಿ ಲಗತ್ತಿಸಿದೆ.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿಗಳಾದ ಶ್ರೀ. ಎಸ್.ಅನೀಸ್ ಸಿರಾಜ್ ಇವರು ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಟಿ.ಎಂ. ವಿಜಯ ಭಾಸ್ಕರ್, ಇವರನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಚುನಾಯಿತ ಪ್ರತಿನಿಧಿಗಳು, ಅಧಿಕಾರಿ ವೃಂದ ಮತ್ತು ಅಧಿಕಾರೇತರ ಸದಸ್ಯರಿಗೆ ಸ್ವಾಗತವನ್ನು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲನೆಯದಾಗಿ ದಿನಾಂಕ: 27.06.2019ರ ಸಭೆಯ ನಡವಳಿಯನ್ನು ಅಂಗೀಕರಿಸಿ, ಕೈಗೊಂಡ ನಿರ್ಣಯಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳನ್ನು ಮುಖ್ಯ ಕಾರ್ಯದರ್ಶಿ ರವರು ಪರಿಶೀಲಿಸಿದರು.

1. ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ಸ್ಥಳಗಳಲ್ಲಿನ ಒಟ್ಟು 2792 ಅಂಗನವಾಡಿಗಳ ಪೈಕಿ ಸ್ವಂತ ನಿವೇಶನ ಲಭ್ಯವಿರುವ ಜಾಗಗಳಲ್ಲಿ 254 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ಜಿಲ್ಲಾವಾರು ಪ್ರಸ್ತಾವನೆಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕಳುಹಿಸಲಾಗಿದೆ ಎಂದು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಇಲಾಖೆ ರವರು ತಿಳಿಸಿದರು. ಇದಕ್ಕೆ ಪ್ರತಿಕ್ರಯಿಸಿದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಪ್ರಧಾನಮಂತ್ರಿ ಜನವಿಕಾಸ ಕಾರ್ಯಕ್ರಮ (PMJVK) ಯೋಜನೆಯಡಿಯಲ್ಲಿ 254 ಅಂಗನವಾಡಿಗಳ ಪೈಕಿ 51 ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಲಾಗುವುದೆಂದು ತಿಳಿಸಿದರು. ಉಳಿದ 203 ಅಂಗನವಾಡಿ ಕೇಂದ್ರಗಳನ್ನು "Urban Anganwadi" ಯೋಜನೆಯಡಿಯಲ್ಲಿ ಸ್ಥಾಪಿಸುವಂತೆ ಹಾಗೂ ಅಲ್ಪಸಂಖ್ಯಾತರಿಗೆಂದು ಕನಿಷ್ಠ ಶೇ. 15 ರಷ್ಟು ಅಂಗನವಾಡಿಗಳನ್ನು ಕಾರ್ಯಗತಗೊಳಿಸುವಂತೆ ತಿಳಿಸಲಾಯಿತು.

   **(ಕ್ರಮ: ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

2. ಉರ್ದು ಶಾಲೆಯ ಶಿಕ್ಷಕರ ನೇಮಕಾತಿಯ ಕುರಿತಂತೆ ಪ್ರಸ್ತಾಪಿಸಲಾಗಿ,

**(i)** ಟಿಇಟಿ (TET) ತರಬೇತಿಯ ಕುರಿತು ಪ್ರತ್ಯೇಕವಾಗಿ ತರಬೇತಿಯನ್ನು ರೂಪಿಸಲಾಗಿರುವುದಿಲ್ಲ, ಬದಲಾಗಿ ಎಲ್ಲಾ ಜಿಲ್ಲೆಗಳಲ್ಲಿ ಒಂದು ಕಾಮನ್ ಫೌಂಡೇಷನ್ ಕೋರ್ಸಿನ (ಎಲ್ಲಾ ನೇಮಕಾತಿಗಳಿಗೆ) ತರಬೇತಿ ನೀಡಲು ಸಂಸ್ಥೆಗಳಿಂದ ಟೆಂಡರ್ ಕರೆಯಲಾಗಿದೆ ಎಂದು ಕಾರ್ಯದರ್ಶಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ತಿಳಿಸಿದರು. ಮುಂದುವರೆದು. ರಾಜ್ಯದಲ್ಲಿರುವ 4000 ಸರ್ಕಾರಿ ಉರ್ದು ಶಾಲೆಗಳಲ್ಲಿ ಈ ವರ್ಷ 1000 ಶಾಲೆಗಳಿಗೆ ಆಂಗ್ಲ ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಬಹುದೆಂದು ಅಭಿಪ್ರಾಯಪಟ್ಟರು. ಅಂತೆಯೇ ಪ್ರಸ್ತಾವನೆಯನ್ನು ಶಿಕ್ಷಣ

ಇಲಾಖೆಗೆ ಸಲ್ಲಿಸುವಂತೆ ಹಾಗೂ ಸದರಿ ಪರಿವರ್ತನೆಗೆ ತಗುಲುವ ವೆಚ್ಚವನ್ನು ಅಲ್ಪಸಂಖ್ಯಾತರ ಇಲಾಖೆಯು ವಹಿಸಲು ಕ್ರಮ ಜರುಗಿಸಬೇಕೆಂದು ಅಧ್ಯಕ್ಷರು ಸೂಚಿಸಿದರು.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು, ಉರ್ದು ಮತ್ತು ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ)**

(ii) ಉರ್ದು ಶಿಕ್ಷಕರ ನೇಮಕಾತಿಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಕಳೆದ 8 ವರ್ಷಗಳಿಂದ ಬಾಕಿ ಇರುವುದನ್ನು ಗಮನಿಸಲಾಗಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಗೆ ಮುಖ್ಯ ಕಾರ್ಯದರ್ಶಿ ಮುಖಾಂತರ ಅರೆ ಸರ್ಕಾರಿ ಪತ್ರವನ್ನು ಬರೆಯಲು ಮಂಡಿಸುವಂತೆ ತಿಳಿಸಲಾಯಿತು.

**(ಕ್ರಮ : ನಿರ್ದೇಶಕರು, ಉರ್ದು ಮತ್ತು ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ ಹಾಗೂ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ)**

೩. ವಸತಿ ಇಲಾಖೆಯ ಪ್ರಗತಿಯ ಬಗ್ಗೆ ಪ್ರಸ್ತಾಪಿಸಿದಾಗ,

(i) ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪಂಚಾಯತ್‌ಗಳಲ್ಲಿ ಅಲ್ಪಸಂಖ್ಯಾತರು ಇಲ್ಲದಿರುವುದರಿಂದ, ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ಅದೇ ತಾಲ್ಲೂಕಿನ ಬೇರೆ ಪಂಚಾಯತ್‌ಗೆ ಸದರಿ ಗುರಿ ಮತ್ತು ಅನುದಾನವನ್ನು ವರ್ಗಾಯಿಸಲು ಸುತ್ತೋಲೆಯನ್ನು ತಕ್ಷಣ ಹೊರಡಿಸುವಂತೆ ತಿಳಿಸಲಾಯಿತು.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

(ii) ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಶಿವಕುಮಾರ್ ಚನ್ನಬಸಪ್ಪ ಉದಾಸಿ ರವರು ಹಾವೇರಿ ಕ್ಷೇತ್ರದಲ್ಲಿ ಸುಮಾರು 85 ಸಾವಿರ ಮತ್ತು ಗದಗ ಕ್ಷೇತ್ರದಲ್ಲಿ ಸುಮಾರು 65 ಸಾವಿರ ನಿವೇಶನ ಮತ್ತು ಮನೆ ಇಲ್ಲದಿರುವವರು ಇರುತ್ತಿದ್ದು, ಈವರವಿಗೆ ಪಂಚಾಯತ್‌ವಾರು ಗುರಿಯನ್ನು ನಿಗಧಿಪಡಿಸಲಾಗಿರುವುದಿಲ್ಲ ಎಂದರು, ಇದಕ್ಕೆ ಪ್ರತಿಕ್ರಯಿಸಿದ, ಕಾರ್ಯದರ್ಶಿ ವಸತಿ ಇಲಾಖೆ ರವರು 2017-18 ನೇ ಸಾಲಿನಲ್ಲಿ ಸರ್ವೆ ಮಾಡಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆ ಬಂದ ಬಳಿಕ ಪಂಚಾಯತ್‌ವಾರು ಗುರಿಯನ್ನು ನಿಗಧಿಪಡಿಸಲಾಗುವುದು ಎಂದರು. ಈ ಕುರಿತು ಕೇಂದ್ರ ಸರ್ಕಾರಕ್ಕೆ ಮಾನ್ಯ ಮುಖ್ಯ ಮಂತ್ರಿ ಮುಖೇನ ಪತ್ರ ಕಳುಹಿಸಲು ಮಂಡಿಸುವಂತೆ ಮುಖ್ಯ ಕಾರ್ಯದರ್ಶಿ ರವರು ತಿಳಿಸಿದರು.

**(ಕ್ರಮ : ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

(iii) ನಗರಗಳಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ಸಾಕಷ್ಟು ಅಲ್ಪಸಂಖ್ಯಾತರು ವಾಸವಾಗುತ್ತಿದ್ದು, ವಸತಿ ನಿರ್ಮಾಣಕ್ಕಾಗಿ ಮನೆಗಳನ್ನು ನಿರ್ಮಿಸಲು ಜಾಗದ ಕೊರತೆ ಇರುವುದರಿಂದ ವಕ್ಫ್ ಮಂಡಳಿಯಿಂದ ಲೀಸ್ ಮೂಲಕ ಜಾಗವನ್ನು ಪಡೆದು ಮನೆಗಳನ್ನು ನಿರ್ಮಿಸುವುದರ ಬಗ್ಗೆ ಕ್ರಮ ವಹಿಸಬಹುದೆಂದು ಹಾಗೂ ಇಂತಹ ಮನೆ ನಿರ್ಮಾಣದ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು (ಕೆಎಂಡಿಸಿ), ಕೊಳಗೇರಿ ಅಭಿವೃದ್ಧಿ ಮಂಡಳಿಯೊಂದಿಗೆ ಒಪ್ಪಂದವನ್ನು ಮಾಡಿ ಫಲಾನುಭವಿಗಳ ವಂತಿಕೆಯನ್ನು ನೇರವಾಗಿ

<u>ಕೆಎಂಡಿಸಿಯಿಂದ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪಾವತಿಸಬಹುದೆಂದು ಸಲಹೆ ನೀಡಲಾಯಿತು.</u>

**(ಕ್ರಮ : ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

4. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಜಾರಿಗೊಳಿಸುತ್ತಿರುವ ಯೋಜನೆಗಳ ಬಗ್ಗೆ ಪರಿಶೀಲಿಸಿದಾಗ –

(i) ಹಲವಾರು ಯೋಜನೆಗಳಲ್ಲಿ ಪ್ರಗತಿಯಾಗದೇ ಇರುವುದನ್ನು ಮುಖ್ಯ ಕಾರ್ಯದರ್ಶಿ ರವರು ಗಮನಿಸಿದರು. ಇದಕ್ಕೆ ಪ್ರತಿಸ್ಪಂದಿಸಿದ ಅಧಿಕಾರೇತರ ಸದಸ್ಯರು ಸಾಕಷ್ಟು ವಿದ್ಯಾರ್ಥಿಗಳಿಗೆ ಕಳೆದ ವರ್ಷದಲ್ಲಿ ವಿದ್ಯಾರ್ಥಿವೇತನ ಬಿಡುಗಡೆಯಾಗದಿರುವ ಬಗ್ಗೆ ಹಾಗೂ ಬಿದಾಯಿ ಯೋಜನೆಯಡಿಯಲ್ಲಿ ಸಾಕಷ್ಟು ಫಲಾನುಭವಿಗಳಿಗೆ ಹಣವನ್ನು ಬಿಡುಗಡೆಗೊಳಿಸದೇ ಇರುವುದನ್ನು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು 'ಬಿದಾಯಿ' ಯೋಜನೆಯಡಿ ಈ ಸಾಲಿನಲ್ಲಿ ರೂ. 60 ಕೋಟಿಯು ನಿಗದಿಯಾಗಿದ್ದು, ಸುಮಾರು 37 ಸಾವಿರ ಅರ್ಜಿದಾರರಿದ್ದು, 12,000 ಫಲಾನುಭವಿಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವುದು ಹಾಗೂ ಒಟ್ಟು ರೂ. 180 ಕೋಟಿ ಅವಶ್ಯಕತೆ ಇರುವುದಾಗಿ ತಿಳಿಸಿದರು. <u>ಈ ಬಗ್ಗೆ ಅನುದಾನವನ್ನು ನೀಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿ ರವರು ತಿಳಿಸಿದರು.</u>

**(ಕ್ರಮ : ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ)**

(ii) ವಿದ್ಯಾರ್ಥಿವೇತನ ಬಿಡುಗಡೆಗೊಳಿಸಲು ಆಗುತ್ತಿರುವ ವಿಳಂಬವನ್ನು ಗಮನಿಸಲಾಗಿ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಯವರಿಗೆ ಕೇಂದ್ರ ಸರ್ಕಾರಕ್ಕೆ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ 3 ವಿಷಯಗಳ ಬಗ್ಗೆ ಪತ್ರಿಸುವುದು.

**(ಕ್ರಮ: ಸರ್ಕಾರದ ಕಾರ್ಯದರ್ಶಿ ಹಾಗೂ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

(iii) ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಸಾಕಷ್ಟು ವಿಳಂಬವಾಗುತ್ತಿರುವುದನ್ನು ಗಮನಿಸಿದಾಗ, ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡಲು ಏಜೆನ್ಸಿಗಳಿಂದ ಟೆಂಡರನ್ನು ಕರೆಯಲಾಗಿ, ಈ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ ರವರು <u>ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ತರಬೇತಿ ನೀಡುವ ಸಂಸ್ಥೆಗಳನ್ನು ಈಗಾಗಲೇ ಗುರುತಿಸಿರುವುದರಿಂದ, ತರಬೇತಿಯನ್ನು ನೀಡಲು ಸದರಿ ಕೌಶಲ್ಯಾಭಿವೃದ್ಧಿ ಇಲಾಖೆಗೆ ಒಪ್ಪಿಸಬಹುದೆಂದು ತಿಳಿಸಿದರು.</u>

**(ಕ್ರಮ : ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಮತ್ತು ಕೌಶಲ್ಯಾಭಿವೃದ್ಧಿ ಇಲಾಖೆ)**

ಕವಿವಿ

5. ಕೋಮು ಗಲಭೆ ತಡೆಗಟ್ಟುವಿಕೆ ಮತ್ತು ನಿಯಂತ್ರಣದ ಬಗ್ಗೆ ಪ್ರಸ್ತಾಪಿಸಲಾಗಿ, ರಾಜ್ಯದ ಹಲವು ಕಾರಾಗೃಹಗಳಲ್ಲಿ ಅವಧಿ ಮೀರಿ ಆರ್ಥಿಕ ತೊಂದರೆಯಿಂದಾಗಿ ಶಿಕ್ಷೆಯನ್ನು ಅನುಭವಿಸುತ್ತಿರುವ ಖೈದಿಗಳ ಬಿಡುಗಡೆಗೊಳಿಸಲು ದಂಡವನ್ನು ಪಾವತಿಸಲು ಎನ್‌ಜಿಒಗಳನ್ನು ಸಂಪರ್ಕಿಸಬಹುದೆಂದು ತಿಳಿಸಲಾಯಿತು.
**(ಕ್ರಮ : ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹಾಗೂ ನಿರ್ದೇಶಕರು ಅಲ್ಪಸಂಖ್ಯಾತ ನಿರ್ದೇಶನಾಲಯ)**

6. ಕೆಲವು ಇಲಾಖೆಗಳಿಂದ ಸೆಪ್ಟಂಬರ್ ತ್ರೈಮಾಸದ ಅಂತ್ಯದವರೆಗಿನ ಮಾಹಿತಿಯನ್ನು ತಪ್ಪಾಗಿ ನೀಡಿರುವುದನ್ನು ಗಮನಿಸಿದ ಮುಖ್ಯ ಕಾರ್ಯದರ್ಶಿ ರವರು ಮಾಹಿತಿಯನ್ನು ಸರಿಯಾಗಿ ಒದಗಿಸುವಂತೆ ತಿಳಿಸಿದರು
**(ಕ್ರಮ : ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಅಲ್ಪಸಂಖ್ಯಾತರ ನಿರ್ದೇಶನಾಲಯ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಲೀಡ್ ಬ್ಯಾಂಕ್ - ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ)**

7. ಪ್ರಧಾನ ವ್ಯವಸ್ಥಾಪಕರು, ರಾಜ್ಯ ಮಟ್ಟದ ಬ್ಯಾಂಕರ್ಸ್ ಕಮಿಟಿ (SLBC) ರವರನ್ನು ಮುಂದಿನ ಸಭೆಗೆ ತ್ರೈಮಾಸಿಕ ಅಂಕಿ ಅಂಶದೊಂದಿಗೆ ಆಹ್ವಾನಿಸಲು ತಿಳಿಸಲಾಯಿತು.
**(ಕ್ರಮ : ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ)**

8. ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯದವರಿಗೆ ರಾಜ್ಯ ಸರ್ಕಾರದ ಪ್ರವರ್ಗ 1, ಪ್ರವರ್ಗ 2ಎ ಮತ್ತು ಕೇಂದ್ರ ಸರ್ಕಾರದ ಒಬಿಸಿ ಪ್ರಮಾಣ ಪತ್ರವನ್ನು ಪಡೆಯಲು ತೊಂದರೆಯಾಗುತ್ತಿರುವ ಬಗ್ಗೆ ಅಧಿಕಾರೇತರ ಸದಸ್ಯರು ಪ್ರಸ್ತಾಪಿಸಿದರು. ಈ ಕುರಿತು ಹಿಂದಿನ ಸಭೆಯಲ್ಲಿ ತಿಳಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದಲೇ ಸುತ್ತೋಲೆಯನ್ನು ಹೊರಡಿಸುವಂತೆ ತಿಳಿಸಲಾಯಿತು.
**(ಕ್ರಮ : ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ ಮತ್ತು ಕಂದಾಯ ಇಲಾಖೆ)**
ಬೆಂಗಳೂರು ಉತ್ತರ, ದಕ್ಷಿಣ ಮತ್ತು ರಾಮನಗರ ಜಿಲ್ಲೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಕ್ಕಾಗಿ ಪಡೆಯುವ ಪ್ರಮಾಣ ಪತ್ರವನ್ನು ನೀಡಲು ಸಾಕಷ್ಟು ತೊಂದರೆಯಾಗುತ್ತಿರುವ ಬಗ್ಗೆ ಅಧಿಕಾರೇತರ ಸದಸ್ಯರು ತಿಳಿಸಿದಾಗ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯುವಂತೆ ತಿಳಿಸಲಾಯಿತು.
**(ಕ್ರಮ : ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ)**

9. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪ್ರತಿ ತ್ರೈಮಾಸಕ್ಕೊಮ್ಮೆ ನಡೆಸುವ ಜಿಲ್ಲಾ ಮಟ್ಟದ ಪ್ರಧಾನ ಮಂತ್ರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವ ಬಗ್ಗೆ ಪ್ರಸ್ತಾಪಿಸಿದ ಮುಖ್ಯ ಕಾರ್ಯದರ್ಶಿ ರವರು ಬೆಳಗಾವಿ ಜಿಲ್ಲೆಯ ತ್ರೈಮಾಸದ ಸಭೆಯನ್ನು ನಡೆಸದೇ ಇರುವುದನ್ನು ಗಮನಿಸಿದರು ಹಾಗೂ ಸಭೆಯನ್ನು ನಡೆಸದೇ ಇರುವಂತಹ ಜಿಲ್ಲಾಧಿಕಾರಿಗಳಿಗೆ ಸಭೆ ನಡೆಸಲು ಪತ್ರ ಬರೆಯುವಂತೆ ತಿಳಿಸಿದರು.
**(ಕ್ರಮ : ಸರ್ಕಾರದ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ)**

10. ಸರ್ಕಾರಿ ಇಲಾಖೆಯಲ್ಲಿ ಅಲ್ಪಸಂಖ್ಯಾತರ ಅಧಿಕಾರಿ/ಸಿಬ್ಬಂದಿಗಳ ಪ್ರಾತಿನಿಧ್ಯತೆ ಬಗ್ಗೆ ಹಿಂದಿನ ಸಭೆಯಲ್ಲಿ ತಿಳಿಸಿದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ಎಲ್ಲಾ ಇಲಾಖೆಗಳನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದು ಮುಂದಿನ ಸಭೆಗೆ ಮಂಡಿಸುವಂತೆ ತಿಳಿಸಲಾಯಿತು.
**(ಕ್ರಮ : ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ)**

11. ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮದಡಿಯಲ್ಲಿ ಕೇಂದ್ರ ಸರ್ಕಾರದಲ್ಲಿ ಒಟ್ಟು 121.00 ಕೋಟಿ ಯೋಜನೆಗಳ ಅಂಗೀಕಾರಕ್ಕೆ ಬಾಕಿ ಉಳಿದಿದ್ದು, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ತಿಳಿಸಲಾಯಿತು.
**(ಕ್ರಮ : ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ)**

12. ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮದಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರುವ ಈ ಕೆಳಗೆ ಸೂಚಿಸಿರುವ ಪ್ರಸ್ತಾವನೆಗಳಿಗೆ ಘಟನೋತ್ತರ ಅನುಮತಿಯನ್ನು ನೀಡಲಾಯಿತು.

**ಪ್ರಸ್ತಾವನೆಗಳು**

| Sl No | Projects Proposed | Amount (Rs. In Lakhs) | Status |
|---|---|---|---|
| 1. | Hostels/ MDR schools/ colleges/ Govt. ITI building projects (4th phase) | 12179.20 | Proposal pending at MoMA, GOI |
| 2. | Common Service Centres – 8 No's (5th phase) | 1120.00 | Approved in 16th EC meeting |
| 3. | Common Service centres – 2 No's (5th phase) | 280.00 | Approved in 16th EC meeting |
| 4. | Adarsh Model schools/ Minority Hostels/ Special schools/ Addl class rooms/ Skill training centres (6th phase) | 17255.00 | Approved in 20th EC meeting |

13. **ಹೊಸದಾಗಿ ತೆಗೆದುಕೊಂಡ ನಿರ್ಣಯಗಳು.**

(1) ಪ್ರಸ್ತುತ ರಾಜ್ಯ ಸರ್ಕಾರವು ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯಮ ತರಗತಿಗಳ ಜೊತೆಗೆ ಆಂಗ್ಲ ಮಾಧ್ಯಮ ತರಗತಿಗಳನ್ನು 2019-20ನೇ ಸಾಲಿನಿಂದ ಪ್ರಾರಂಭಿಸಲು ಸುತ್ತೋಲೆ ಹೊರಡಿಸಿರುತ್ತಾರೆ. ಇದರಿಂದ ಶಾಲೆಗಳಲ್ಲಿ ನಡೆಯುವ ನಲಿ-ಕಲಿ ಚಟುವಟಿಕೆ ಹಾಗೂ ಇತರೆ ಕೌಶಲ್ಯಗಳನ್ನು ಇಂಗ್ಲಿಷ್ ಭಾಷೆಯ ಮೂಲಕ ಕಲಿಯುವುದರಿಂದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ತುಂಬ ಪ್ರಯೋಜನಕಾರಿಯಾಗಿರುತ್ತದೆ.

ಅದರಂತೆ ಇದೇ ಮಾದರಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹಾಲಿ ಶಿಕ್ಷಣ ಇಲಾಖೆಯ 5000 ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನಿಷ್ಠ 1000 ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿ ಮೊದಲನೇ ಭಾಷೆಯಾಗಿ ಉರ್ದು, ಎರಡನೇ ಭಾಷೆಯಾಗಿ ಕನ್ನಡ, ಮೂರನೇ ಭಾಷೆಯಾಗಿ ಇಂಗ್ಲಿಷ್ ಹಾಗೂ ಬಾಕಿ ವಿಷಯಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಕ್ರಮವಹಿಸುವಂತೆ ಹಾಗೂ ಶಾಲೆಗಳಲ್ಲಿ ನಡೆಯುವ ನಲಿ-ಕಲಿ ಚಟುವಟಿಕೆ ಹಾಗೂ ಇತರೆ ಕೌಶಲ್ಯಗಳನ್ನು ಇಂಗ್ಲಿಷ್ ಭಾಷೆಯ ಮೂಲಕ ಹಾಲಿ ಉರ್ದು ತರಗತಿಯ ಜೊತೆಗೆ ಆಂಗ್ಲ ಮಾಧ್ಯಮ ತರಗತಿಯನ್ನು ಪ್ರಾರಂಭಿಸಿ ಅಲ್ಪಸಂಖ್ಯಾತರ ಮಕ್ಕಳನ್ನು ಪ್ರತಿಭಾವಂತರನ್ನಾಗಿ ಹೊರತರಬಹುದು. ಆದ್ದರಿಂದ ಕನ್ನಡ ಮಾಧ್ಯಮ ತರಗತಿಗಳ ಜೊತೆಗೆ ಆಂಗ್ಲ ಮಾಧ್ಯಮ